ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಪ್ರಾಸಾ- 36 ಚಾಸಾ- 43**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ನರೇಂದ್ರ ಶರ್ಮ |
| ತಂದೆಯ ಹೆಸರುಃ | : | ರಾಮಲಾಲ್ ಶರ್ಮ |
| ವಯಸ್ಸುಃ | : | 46 ವರ್ಷ |
| ಉದ್ಯೋಗಃ | : | ಪ್ರೊಫೆಶನಲ್ ಕೊರಿಯರ್ಸ್ |
| ವಾಸ | : | ಶಿವಮೊಗ್ಗ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 14-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಶಿವಮೊಗ್ಗದಲ್ಲಿ ಪ್ರೇಂ ಪ್ರಕಾಶ್ ಎಂಬುವವರು ನಡೆಸುತ್ತಿರುವ ಪ್ರೊಫೆಶನಲ್ ಕೊರಿಯರ್ಸ್ ನಲ್ಲಿ 2002 ರಿಂದ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದೆನು. ಅಲ್ಲಿ ನಾನು ಕೊರಿಯರ್ ಮೂಲಕ ಬಂದ ವಸ್ತುಗಳನ್ನು ಸ್ವೀಕರಿಸುವುದು ಮತ್ತು ಕೊರಿಯರ್ ಮೂಲಕ ಕಳುಹಿಸುವ ವಸ್ತುಗಳನ್ನು ಕಳುಹಿಸುವ ಕೆಲಸ ಮಾಡುತ್ತಿದ್ದೆನು. ನನಗೆ ಆ ಕಾಲಕ್ಕೆ 1ನೇ ಆರೋಪಿತರ ಪರಿಚಯ ಇರಲಿಲ್ಲ. ಆ ಕಾರಣಕ್ಕೆ ನಾನು 1ನೇ ಆರೋಪಿತರಿಗೆ ಸಂಬಂಧಿಸಿದ್ದ ಕೊರಿಯರ್ ನ್ನು ಶಿವಮೊಗ್ಗದ ರಾಜು ಏಜೆನ್ಸಿಯವರಿಗೆ ಕಳುಹಿಸಿಲ್ಲ. ಆರೋಪಿತರು ಡಾಃ ಶಶಿಧರ್ ರವರ ಹೆಸರಿನಲ್ಲಿ ಇಂಡೆಂಟ್ ತಯಾರಿಸಿ ನಮ್ಮ ಕೊರಿಯರ್ ಮೂಲಕ ರಾಜು ಏಜೆನ್ಸಿಗೆ ಕಳುಹಿಸುತ್ತಿರಲಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ

ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರು ಸಕಲೇಶಪುರದ ಡಾ ಶಶಿಧರ್ ರವರ ಹೆಸರಿನಲ್ಲಿ ಇಂಡೆಂಟ್ ತಯಾರಿಸಿ ನಮ್ಮ ಪ್ರೊಫೆಶನಲ್ ಕೊರಿಯರ್ಸ್ ಮೂಲಕ ಶಿವಮೊಗ್ಗದ ರಾಜು ಏಜೆನ್ಸಿಗೆ ಕಳುಹಿಸುತ್ತಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಮ್ಮಲ್ಲಿ ಪೊಲೀಸರು ದಾಖಲೆಗಳನ್ನು ಕೇಳಿದ್ದರು ಎಂದರೆ ಸರಿಯಲ್ಲ. ಆಗ ನಾನು ಹಳೆದಾಖಲೆಗಳನ್ನು ಇಟ್ಟುಕೊಳ್ಳುವುದಿಲ್ಲ, ಇದ್ದರೆ ಹುಡುಕಿಕೊಡುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಈಗ ಓದಿ ಹೇಳಿದಂತೆ ಹೇಳಿಕೆನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆಓದಿ ಹೇಳಿದ ಹೇಳಿಕೆಯನ್ನು ನಿಪಿ-77 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1ನೇ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

**ಪಾಟೀಸವಾಲುಃ 2ನೇ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**